# ಸಂಕಲನಾತ್ಮಕ ಮೌಲ್ಯಮಾಪನ–1

## ಅರ್ಧವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ನೀಲನಕ್ಷೆ

ತರಗತಿ: 10ನೇ ತರಗತಿ ವಿಷಯ: ಸಮಾಜ ವಿಜ್ಞಾನ

### ವಿಭಾಗವಾರು ಮತ್ತು ಪ್ರಶ್ನೆವಾರು ಅಂಕ ಹಂಚಿಕೆ

| ವಿಭಾಗ | MCQ | 1 Q | 2Q | 3Q | 4Q | 5Q | ಒಟ್ಟು ಪ್ರಶ್ನೆ | ಒಟ್ಟು ಅಂಕ |
|---|---|---|---|---|---|---|---|---|
| ಇತಿಹಾಸ | 1(2) | 1(2) | 2(2) | 3(3) | 4(2) | 00 | 11 | 25 |
| ರಾಜ್ಯಶಾಸ್ತ್ರ | 1(1) | 1(1) | 2(1) | 3(1) | 4(1) | 00 | 05 | 11 |
| ಸಮಾಜಶಾಸ್ತ್ರ | 1(2) | 1(1) | 2(1) | 3(1) | 00 | 00 | 05 | 08 |
| ಭೂಗೋಳಶಾಸ್ತ್ರ | 1(1) | 1(2) | 2(2) | 3(2) | 4(1) | 5(1) | 09 | 22 |
| ಅರ್ಥಶಾಸ್ತ್ರ | 1(1) | 1(1) | 2(1) | 3(1) | 00 | 00 | 04 | 07 |
| ವ್ಯ. ಅಧ್ಯಯನ | 1(1) | 1(1) | 2(1) | 3(1) | 00 | 00 | 04 | 07 |
| ಒಟ್ಟು | 8(8) | 8(8) | 16(8) | 27(9) | 16(4) | 5(1) | 38 | 80 |

### ಉದ್ದಿಷ್ಟವಾರು ಅಂಕ ಹಂಚಿಕೆ

| ಕ್ರ ಸಂ | ಉದ್ದಿಷ್ಟ | ಅಂಕ | ಶೇಕಡವಾರು |
|---|---|---|---|
| 1 | ಜ್ಞಾನ | 13 | 16% |
| 2 | ತಿಳುವಳಿಕೆ | 40 | 50% |
| 3 | ಅನ್ವಯ | 22 | 28% |
| 4 | ಕೌಶಲ | 5 | 6% |
| | ಒಟ್ಟು | 80 | 100% |

# ಘಟಕವಾರು ಅಂಕ ಹಂಚಿಕೆ

| ಕ್ರ. ಸಂ | ಘಟಕಗಳು | ಜ್ಞಾನ | | | | | ತಿಳುವಳಿಕೆ | | | | | ಅನ್ವಯ | | | | | ಕೌಶಲ | ಪ್ರಶ್ನೆ ಸಂಖ್ಯೆ | ಒಟ್ಟು ಅಂಕ |
|---|---|---|---|---|---|---|---|---|---|---|---|---|---|---|---|---|---|---|---|
| | ಇತಿಹಾಸ | MCQ | 1M | 2M | 3M | 4M | MCQ | 1M | 2M | 3M | 4M | MCQ | 1M | 2M | 3M | 4M | 5M | | |
| 1 | ಭಾರತಕ್ಕೆ ಯುರೋಪಿಯನ್ನರ ಆಗಮನ | 1(1) | | 1(2) | | | | 1(1) | | | | | | | | | | 03 | 04 |
| 2 | ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ | | 1(1) | | | | 1(1) | | 1(2) | | | | | | | | | 03 | 04 |
| 3 | ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು | | | | | | | | | | | | | | 1(3) | | | 01 | 03 |
| 4 | ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು ಮತ್ತು ಮೈಸೂರಿನ ಒಡೆಯರು | | | | | | | | | 1(3) | 1(4) | | | | 1(3) | 1(4) | | 02 | 07 |
| 5 | ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳು | | | | | | | | | 1(3) | 1(4) | | | | | | | 02 | 07 |
| | ರಾಜ್ಯಶಾಸ್ತ್ರ | | | | | | | | | | | | | | | | | | |
| 6 | ಭಾರತಕ್ಕಿರುವ ಸವಾಲುಗಳು ಹಾಗೂ ಅವುಗಳ ಪರಿಹಾರೋಪಾಯಗಳು | | | 1(2) | | | | | | | 1(4) | 1(1) | | | | | | 03 | 07 |
| 7 | ಅನ್ಯ ರಾಷ್ಟ್ರಗಳೊಂದಿಗೆ ಭಾರತದ ಸಂಬಂಧ | | | 1(2) | | | | 1(1) | | 1(3) | | | | | | | | 02 | 04 |
| | ಸಮಾಜಶಾಸ್ತ್ರ | | | | | | | | | | | | | | | | | | |
| 8 | ಸಾಮಾಜಿಕ ಸ್ತರ ವಿನ್ಯಾಸ | | | | | | | | | 1(3) | | 1(1) | | 1(2) | | | | 02 | 04 |
| 9 | ದುಡಿಮೆ ಮತ್ತು ಆರ್ಥಿಕ ಜೀವನ | | 1(1) | | | | 1(1) | | | | | | | 1(2) | | | | 03 | 04 |
| | ಭೂಗೋಳ ವಿಜ್ಞಾನ | | | | | | | | | | | | | | | | | | |
| 10 | ಭಾರತ: ಭೌಗೋಳಿಕ ಸ್ಥಾನ ಮತ್ತು ವಿಸ್ತೀರ್ಣ ಹಾಗೂ ಪ್ರಾಕೃತಿಕ ಲಕ್ಷಣಗಳು | | | 1(2) | | | | | | | 1(4) | | | | | | 1* | 03 | 11 |

| | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|
| 11 | ಭಾರತದ ಋತುಗಳು | | | | | | 1(1) | 1(1) | | | | | | | | | 1* | 02 | 02 |
| 12 | ಭಾರತದ ಮಣ್ಣುಗಳು | | | | | | | | | | | | 1(1) | | 1(3) | | | 02 | 04 |
| 13 | ಭಾರತದ ಅರಣ್ಯಗಳು | | | | | | | | | 1(3) | | | | | | | 1* | 01 | 03 |
| 14 | ಭಾರತದ ಜಲಸಂಪನ್ಮೂಲಗಳು | | | 1(2) | | | | | | 1(3) | | | | | | | 2* | 01 | 02 |
| | **ಅರ್ಥಶಾಸ್ತ್ರ** | | | | | | | | | | | | | | | | | | |
| 15 | ಅರ್ಥವ್ಯವಸ್ಥೆ ಮತ್ತು ಸರ್ಕಾರ | 1(1) | | | | | 1(1) | | | | | | | 1(2) | 1(3) | | | 04 | 07 |
| | **ವ್ಯವಹಾರ ಅಧ್ಯಯನ** | | | | | | | | | | | | | | | | | | |
| 16 | ಬ್ಯಾಂಕ್ ವ್ಯವಹಾರಗಳು | 1(1) | | | | | | 1(1) | | 1(3) | | | | 1(2) | | | | 04 | 07 |
| | ಒಟ್ಟು | 9(13) | | | | | 18(40) | | | | | 10(22) | | | | | 1(05) | 38 | 80 |

# ಸಂಕಲನಾತ್ಮಕ ಮೌಲ್ಯಮಾಪನ-1

ಅಂಕಗಳು:-80

ತರಗತಿ:- 10ನೇ ತರಗತಿ ವಿಷಯ:- ಸಮಾಜ ವಿಜ್ಞಾನ ಸಮಯ:-3 ಗಂಟೆ

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರ ಬರೆಯಲು ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರಗಳೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.** **8x1=8**

1.ಬ್ರಿಟಿಷರಿಗೆ ಬಂಗಾಳದಲ್ಲಿ ಮುಕ್ತ ವ್ಯಾಪಾರವನ್ನು ಮಾಡಲು ದಸ್ತಕ(ಪರವಾನಗಿ)ಗಳನ್ನು ನೀಡಿದ ಮೊಘಲ್ ದೊರೆ

ಎ) ಜಹಾಂಗೀರ್ ಬಿ) ಫಾರೂಕ್ ಶಿಯಾರ್ ಸಿ) 2ನೇ ಷಾ ಆಲಂ ಡಿ) ಮೀರ್ ಖಾಸಿಂ

2 ಮೊದಲನೇ ಆಂಗ್ಲೋ ಮರಾಠ ಯುದ್ಧದ ಅಂತ್ಯದಲ್ಲಿ ಆದ ಒಪ್ಪಂದ

ಎ)ಸಾಲ್ಬಾಯ್ ಬಿ)ಬೆಸ್ಸಿನ್ ಸಿ)ಮದ್ರಾಸ್ ಡಿ)ಲಾಹೋರ್

3. ಇತ್ತೀಚಿಗೆ ಸರ್ಕಾರಿ ಕಛೇರಿಗಳಲ್ಲಿ ಸಿಸಿ ಕ್ಯಾಮೆರಗಳನ್ನು ಅಳವಡಿಸುತ್ತಿರುವುದಕ್ಕೆ ಕಾರಣ

ಎ) ಭ್ರಷ್ಟಾಚಾರ ಬಿ) ನಿರುದ್ಯೋಗ ಸಿ) ಬಡತನ ಡಿ) ಕೋಮುವಾದ

4.. 1976ರಲ್ಲಿ ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯನ್ನು ಹೀಗೆ ತಿದ್ದುಪಡಿ ಮಾಡಲಾಗಿದೆ

ಎ)ಪರಿಶಿಷ್ಟ ಪಂಗಡದ ಕಾಯ್ದೆ ಬಿ)ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ ಸಿ)ಅಸ್ಪೃಶ್ಯತಾ ನಿರ್ಮೂಲನಾ ಕಾಯ್ದೆ ಡಿ)ನಾಗರಿಕರ ಕಾಯ್ದೆ

5. ಚಿತ್ರ ಕಲಾಕಾರನೊಬ್ಬನು ತನ್ನ ಆತ್ಮ ಸಂತೋಷಕ್ಕಾಗಿ ಚಿತ್ರವೊಂದನ್ನು ಬಿಡಿಸುವ ಕಾರ್ಯದಲ್ಲಿ ತೊಡಗಿರುವುದು

ಎ) ಕೂಲಿ ಸಹಿತ ದುಡಿಮೆ ಬಿ) ಶ್ರಮ ವಿಭಜನೆ ಸಿ) ಕೂಲಿ ರಹಿತ ದುಡಿಮೆ ಡಿ) ವಿಶೇಷ ಪರಿಣಿತಿ

6. ಸಾಮಾನ್ಯವಾಗಿ ಚಂಡ ಮಾರುತಗಳು ಕಂಡು ಬರುವುದು ಈ ಕಾಲದಲ್ಲಿ

ಎ) ನೈರುತ್ಯ ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ ಬಿ) ಬೇಸಿಗೆ ಕಾಲ ಸಿ) ಮಳೆಗಾಲ ಡಿ) ಚಳಿಗಾಲ

7. ಪ್ರಸ್ತುತ ಭಾರತದ ಕೇಂದ್ರ ಸರ್ಕಾರ ಯೋಜನಾ ಆಯೋಗ ಸ್ಥಾನದಲ್ಲಿ ಈ ಆಯೋಗವನ್ನು ಸ್ಥಾಪಿಸಿದೆ

ಎ) ಹೊಸ ಯೋಜನಾ ಆಯೋಗ ಬಿ) ನೂತನ ಆಯೋಗ ಸಿ) ಅಭಿವೃದ್ದಿ ಆಯೋಗ ಡಿ) ನೀತಿ ಆಯೋಗ

8. ಕಿಸಾನ್ ವಿಕಾಸ ಪತ್ರಗಳನ್ನು ನೀಡುವ ಸಂಸ್ಥೆ

ಎ) ಭೂ ಅಭಿವೃದ್ಧಿ ಬ್ಯಾಂಕ್ ಬಿ) ಸಹಕಾರಿ ಬ್ಯಾಂಕ್ ಸಿ) ರಿಜರ್ವ್ ಬ್ಯಾಂಕ್ ಡಿ) ಅಂಚೆ ಕಛೇರಿ

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ:** **8x1=8**

9. ಗೋವಾ ಪೋರ್ಚುಗೀಸರ ಆಡಳಿತ ಕೇಂದ್ರವಾದುದು ಹೇಗೆ?
10. ಸಹಾಯಕ ಸೈನ್ಯ ಪದ್ಧತಿ ಎಂದರೇನು?
11. ಸಾರ್ವಭೌಮ ರಾಷ್ಟ್ರ ಎಂದರೇನು?
12. ಕೂಲಿ ರಹಿತ ದುಡಿಮೆ ಎಂದರೇನು?
13. ಭಾರತವು ಯಾವ ಬಗೆಯ ವಾಯುಗುಣ ಹೊಂದಿದೆ?
14. ಕಪ್ಪು ಮಣ್ಣು ದೀರ್ಘ ಕಾಲ ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ. ಏಕೆ?
15. ಡಾ॥ ಎಂ.ಎಸ್ ಸ್ವಾಮಿನಾಥನ್‌ರವರನ್ನು 'ಭಾರತದ ಹಸಿರು ಕ್ರಾಂತಿಯ ಪಿತಾಮಹ' ಎಂದು ಕರೆಯುತ್ತಾರೆ. ಏಕೆ?
16. ಬ್ಯಾಂಕುಗಳಲ್ಲಿ ಖಾತೆಗಳನ್ನು ತೆರೆಯುವುದು ಅವಶ್ಯಕ. ಏಕೆ?

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ:** **8x2=16**

17. ಬಕ್ಸಾರ್ ಕದನದ ಪರಿಣಾಮಗಳಾವುವು?
18. 1ನೇ ಆಂಗ್ಲೋ ಮರಾಠ ಯುದ್ಧಕ್ಕೆ ಕಾರಣಗಳೇನು?
19. ಭಾರತದಲ್ಲಿ ಪ್ರಾದೇಶಿಕವಾದವು ಸಹಜವಾಗಿ ಬೆಳೆಯಲು ಕಾರಣವಾಗುವ ಅಂಶಗಳಾವುವು?

ಅಥವಾ

ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣಗಳಾವುವು?

20. ಸಾಮಾಜಿಕ ಸ್ತರವಿನ್ಯಾಸ ಸರ್ವವ್ಯಾಪಕವಾದುದೆಂದು ಹೇಗೆ ಹೇಳುವಿರಿ.

ಅಥವಾ

ದುಡಿಮೆಯ ತಾರತಮ್ಯತೆಯನ್ನು ವಿವರಿಸಿ.

21. ಡೂನ್ ಎಂದರೇನು? ಉದಾಹರಣೆ ಕೊಡಿ.

22. ಭಾರತದಲ್ಲಿ ನೀರಾವರಿ ಏಕೆ ಅತ್ಯಾವಶ್ಯಕ?

23. ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳನ್ನು ತಿಳಿಸಿ

24. ಅಂಚೆ ಕಛೇರಿಗಳು ಅನೇಕ ಹಣಕಾಸಿನ ವ್ಯವಹಾರಗಳನ್ನ ಸಹ ಕೈಗೊಳ್ಳುತ್ತಿವೆ. ಸಮರ್ಥಿಸಿ.

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ: 9x3=27**

25. ಬ್ರಿಟಿಷ್ ಶಿಕ್ಷಣದಿಂದ ಉಂಟಾದ ಪರಿಣಾಮಗಳ ಪಟ್ಟಿ ಮಾಡಿ.

ಅಥವಾ

ಕಿತ್ತೂರಿನ ರಾಣಿ ಚೆನ್ನಮ್ಮಳಿಗೆ ಬ್ರಿಟಿಷರ ವಿರುದ್ಧ ಯುದ್ಧ ಅನಿವಾರ್ಯವಾಗಿತ್ತು. ಏಕೆ?

26. ಬ್ರಹ್ಮಸಮಾಜದ ಬೋಧನೆಗಳನ್ನು ವಿವರಿಸಿ.

27. ಚಿಕ್ಕದೇವರಾಜ ಒಡೆಯರ ಸಾಧನೆಗಳನ್ನು ವಿವರಿಸಿ.

28. ಅನ್ಯರಾಷ್ಟ್ರಗಳೊಂದಿಗೆ ಉತ್ತಮ ಭಾಂದವ್ಯ ಅವಶ್ಯಕ ಏಕೆ?

29. ಸಾಮಾಜಿಕ ಸ್ತರ ವಿನ್ಯಾಸದ ಲಕ್ಷಣಗಳಾವುವು?

30. ಮಣ್ಣಿನ ಸವೆತವನ್ನು ನೀವು ಹೇಗೆ ತಡೆಗಟ್ಟಬಹುದು?

31. ಭಾರತದಲ್ಲಿ ಅರಣ್ಯ ನಾಶಕ್ಕೆ ಕಾರಣಗಳೇನು?

ಅಥವಾ

ವಿವಿಧೋದ್ದೇಶ ನದಿ ಕಣಿವೆ ಯೋಜನೆಯ ಉದ್ದೇಶಗಳಾವುವು?

32. ಭಾರತದ ಆರ್ಥಿಕ ಪ್ರಗತಿಯಲ್ಲಿ ಪಂಚವಾರ್ಷಿಕ ಯೋಜನೆಗಳು ಪ್ರಮುಖ ಪಾತ್ರವಹಿಸಿವೆ. ಹೇಗೆ?

ಅಥವಾ

ಕೃಷಿ ವಲಯವು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳೇನು?

33. ಬ್ಯಾಂಕ್ ಖಾತೆಯನ್ನು ತೆರೆಯುವ ವಿಧಾನವನ್ನು ವಿವರಿಸಿ.

ಅಥವಾ

ಬ್ಯಾಂಕ್ ನಿರ್ವಹಿಸುವ ಕಾರ್ಯಗಳಾವುವು?

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ: 4x4=16**

34. ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದ ಬಗ್ಗೆ ವಿವರಿಸಿ.

ಅಥವಾ

ವಿವೇಕಾನಂದರು ಯುವಶಕ್ತಿಯ ಪ್ರೇರಕರಾಗಿದ್ದರು. ಹೇಗೆ ಎಂಬುದನ್ನು ವಿವರಿಸಿ.

35. ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಸಾಧನೆಗಳನ್ನು ವಿವರಿಸಿ

36. ಸಾಕ್ಷರತೆಯ ಮಟ್ಟವನ್ನು ಹೆಚ್ಚಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳಾವುವು?

37. ಹಿಮಾಲಯ ಪರ್ವತದಿಂದಾಗುವ ಪ್ರಯೋಜನಗಳು ಯಾವುವು?

**VI. 38. ಭಾರತದ ನಕ್ಷೆಯನ್ನು ಬರೆದು ಇವುಗಳನ್ನು ಗುರುತಿಸಿ: 1+4=5**

ಎ) ಭಾರತದ ಅತ್ಯಂತ ಉತ್ತರ ತುದಿ

ಬಿ) ದಕ್ಷಿಣ ಭಾರತದಲ್ಲಿನ ಅತ್ಯುನ್ನತ ಶಿಖರ

ಸಿ) ಬನ್ನೇರುಘಟ್ಟ

ಡಿ) ಹಿರಾಕುಡ್ ಯೋಜನೆ

# ಮಾದರಿ ಉತ್ತರಗಳು


| | |
|---|---|
| 1) | ಬಿ) ಫಾರೂಕ್ ಶಿಯಾರ್ |
| 2) | ಎ)ಸಾಲ್ಬಾಯ್ |
| 3) | ಎ) ಭ್ರಷ್ಟಾಚಾರ |
| 4) | ಬಿ)ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ |
| 5) | ಸಿ) ಕೂಲಿ ರಹಿತ ದುಡಿಮೆ |
| 6) | ಎ) ನೈರುತ್ಯ ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ |
| 7) | ಡಿ) ನೀತಿ ಆಯೋಗ |
| 8) | ಡಿ) ಅಂಚೆ ಕಛೇರಿ |
| 9) | ಆಲ್ಫೋನ್ಸೊ ಆಲ್ಬುಕರ್ಕ್ ಸಾ.ಶ.1510ರಲ್ಲಿ ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿಸಿಕೊಂಡನು. |
| 10) | ಸಹಾಯಕ ಸೈನ್ಯ ಪದ್ಧತಿಯು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಭಾರತೀಯ ರಾಜ್ಯಗಳ ನಡುವಿನ ಒಂದು ಸೈನಿಕ ಒಪ್ಪಂದವಾಗಿದೆ. |
| 11) | ಆಂತರಿಕ ಹಾಗೂ ಬಾಹ್ಯ ವಿಚಾರಗಳಲ್ಲಿ ಸ್ವಯಂ ನಿರ್ಧಾರದ ಹಕ್ಕು ಹೊಂದಿದ ದೇಶ. |
| 12) | ಯಾವುದೇ ರೀತಿಯ ಸಂಭಾವನೆ ಅಥವಾ ವಸ್ತುಗಳ ರೂಪದ ಪ್ರತಿಫಲ ಇಲ್ಲದ ದುಡಿಮೆಯ ಚಟುವಟಿಕೆಗೆ ಕೂಲಿ ರಹಿತ ದುಡಿಮೆ ಎಂದು ಕರೆಯಲಾಗುತ್ತದೆ. |
| 13) | ಉಷ್ಣವಲಯದ ಮಾನ್ಸೂನ್ ಮಾದರಿಯ ವಾಯುಗುಣ |
| 14) | ಕಪ್ಪು ಮಣ್ಣಿನಲ್ಲಿ ಜೇಡಿ ಮಿಶ್ರಣ ಹೆಚ್ಚಾಗಿದ್ದು ದೀರ್ಘ ಕಾಲ ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ. |
| 15) | ಕೃಷಿಯಲ್ಲಿ ಸುಧಾರಿತ ತಂತ್ರಜ್ಞಾನವನ್ನು ಪರಿಚಯ ಮಾಡಿದ್ದರಿಂದ |
| 16) | ಬ್ಯಾಂಕುಗಳ ಸೇವೆಗಳನ್ನು ಪಡೆಯಲು ಬ್ಯಾಂಕುಗಳಲ್ಲಿ ಖಾತೆಗಳನ್ನು ತೆರೆಯುವುದು ಅವಶ್ಯಕವಾಗಿದೆ. |
| 17) | • ಕಂಪನಿಗೆ ಬಂಗಾಳದ ಮೇಲಿನ 'ದಿವಾನಿ' ಹಕ್ಕನ್ನು ಎರಡನೇ ಷಾ ಆಲಂ ನೀಡಿದನು.<br>• ಷಾ ಆಲಂ ವಾರ್ಷಿಕ 26 ಲಕ್ಷ ರೂಪಾಯಿಗಳನ್ನು ಪಡೆದು ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲ ಬಿಟ್ಟುಕೊಡಬೇಕಾಯಿತು.<br>• ಷುಜ್–ಉದ್–ದೌಲನು ಯುದ್ಧನಷ್ಟ ಪರಿಹಾರವಾಗಿ 50ಲಕ್ಷ ರೂಪಾಯಿಗಳನ್ನು ಕಂಪನಿಗೆ ನೀಡವುದು.<br>• ಮೀರ್ ಜಾಫರ್ ಮರಣ<br>• ಮಗನಿಗೆ ವಿಶ್ರಾಂತಿ ವೇತನ<br>• ಬಂಗಾಳದ ಪೂರ್ಣ ಆಡಳಿತವನ್ನು ಕಂಪನಿ ವಹಿಸಿಕೊಂಡಿತು. |
| 18) | • ಮೊಘಲ್ ಚಕ್ರವರ್ತಿಯು ಕೋರ ಮತ್ತು ಅಲಹಾಬಾದ್‌ಗಳನ್ನು ಮರಾಠರಿಗೆ ಕೊಟ್ಟಿದ್ದು<br>• ಪೇಶ್ವೆ ಹುದ್ದೆಗಾಗಿ ಮರಾಠರ ಅಂತರಿಕ ಕಚ್ಚಾಟ<br>• ರಘೋಬನು ಬ್ರಿಟಿಷರ ಸಹಾಯ ಕೋರಿದ್ದು |
| 19) | • ಸಾಮಾಜಿಕ ಕಟ್ಟುಪಾಡುಗಳು<br>• ಆರ್ಥಿಕ ವಿಚಾರಗಳು<br>• ಸಾಂಸ್ಕೃತಿಕ ಭಿನ್ನತೆಗಳು<br>• ಭೌಗೋಳಿಕ ಪರಿಸರ<br>ಅಥವಾ<br>• ಟಿಬೆಟ್ ವಿವಾದ<br>• 1962ರ ಭಾರತ ಮತ್ತು ಚೀನಾ ಯುದ್ಧ<br>• ಗಡಿ ವಿವಾದ<br>• ಅರುಣಾಚಲ ಪ್ರದೇಶ ತನ್ನದೆನ್ನುತ್ತಿರುವ ಚೀನಾವಾದ |

| | |
|---|---|
| **20)** | • ಸಾಮಾಜಿಕ ಸ್ತರವ್ಯವಸ್ಥೆಯು ವಿಶ್ವವ್ಯಾಪಿಯಾಗಿದೆ.<br>• ಮಾನವ ಸಮಾಜ ಎಲ್ಲೆಲ್ಲಿದೆಯೋ ಅಲ್ಲೆಲ್ಲ ಇದೆ.<br>• ಸಾಮಾಜಿಕ ಅಂಶಗಳ ಆಧಾರದಲ್ಲಿ ಸಾಮಾಜಿಕ ಸ್ತರ ವಿನ್ಯಾಸವು ಎಲ್ಲಾ ಮಾನವ ಸಮಾಜದಲ್ಲಿಯೂ ಕಂಡು ಬರುತ್ತದೆ<br>ಅಥವಾ<br>• ಮಹಿಳೆ ಮತ್ತು ಪುರುಷರಿಬ್ಬರೂ ಒಂದು ದುಡಿಮೆಯಲ್ಲಿ ತೊಡಗಿದರೂ ಅವರಿಗೆ ದೊರಕುವ ಸಂಭಾವನೆ ಸಮಾನವಾಗಿರುವುದಿಲ್ಲ.<br>• ಭಾರತದಲ್ಲಿ ಪುರುಷರಿಗೆ ಉತ್ತಮ ಸ್ವರೂಪದ ಉದ್ಯೋಗಗಳನ್ನು ನೀಡಲಾಗುತ್ತಿದೆ.<br>• ಪುರುಷರಿಗೆ ಹೆಚ್ಚಿನ ಸಂಬಳವನ್ನೂ, ಮಹಿಳೆಯರಿಗೆ ಕಡಿಮೆ ಸಂಬಳವನ್ನು ನೀಡಲಾಗುತ್ತಿದೆ.<br>• ಸರ್ಕಾರಿ ವಲಯದ ಶ್ರೇಣೀಕೃತ ದುಡಿಮೆಯಲ್ಲಿ ಅಸಮಾನತೆ ಕಾಣಬಹುದು.<br>• ಖಾಸಗಿ ವಲಯದಲ್ಲಿ ದುಡಿಮೆಯ ಅಸಮಾನತೆಯನ್ನು ಹೆಚ್ಚಾಗಿ ಕಾಣಬಹುದು.<br>• ಕೃಷಿ ವಲಯದ ದುಡಿಮೆಯು ಲಿಂಗ, ವಯಸ್ಸು, ಸಾಮರ್ಥ್ಯಗಳ ಆಧಾರದ ಮೇಲೆ ಕೆಲಸ ಕಾರ್ಯಗಳನ್ನು ಅಸಮಾನ ರೀತಿಯಲ್ಲಿ ಹಂಚಿಕೆ ಮಾಡುತ್ತದೆ.<br>• ದುಡಿಮೆಯಲ್ಲಿನ ಅಸಮಾನತೆಯು ವರ್ಗ, ಆದಾಯ, ಸಂಭಾವನೆ, ಲಿಂಗ, ಪ್ರದೇಶ, ಜಾತಿ ಮತ್ತು ಧರ್ಮ ಮೊದಲಾದವುಗಳಿಂದ ಪ್ರಭಾವಿತಗೊಂಡಿರುತ್ತದೆ. |
| **21)** | • ಸಿವಾಲಿಕ್ ಬೆಟ್ಟಗಳಲ್ಲಿನ ಸಮತಟ್ಟಾದ ತಳವುಳ್ಳ ಕಣಿವೆಗಳನ್ನು 'ಡೂನ್ಸ್' ಎನ್ನುವರು..<br>ಉದಾ:– ಡೆಹರಾ ಡೂನ್ |
| **22)** | • ಕೃಷಿ ಬಹುವಾಗಿ ಮಾನ್ಸೂನ್ ಮಳೆಯನ್ನಾಧರಿಸಿದೆ.<br>• ಮಳೆಯ ಹಂಚಿಕೆಯು ಋತುಕಾಲಿಕ, ಅಕಾಲಿಕ ಮತ್ತು ಅಸಮಾನತೆಯಿಂದ ಕೂಡಿದೆ.<br>• ಕೆಲವು ಬೆಳೆಗಳಿಗೆ ಹೆಚ್ಚಿನ ಪ್ರಮಾಣದ ಹಾಗೂ ನಿರಂತರವಾದ ನೀರಿನ ಪೂರೈಕೆ ಅಗತ್ಯ.<br>• ಅಧಿಕ ಇಳುವರಿ ಮತ್ತು ಉತ್ಪಾದನೆಗಾಗಿಯೂ ನಿರಂತರ ನೀರಿನ ಪೂರೈಕೆ ಅಗತ್ಯ. |
| **23)** | • ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವುದು.<br>• ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು.<br>• ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡುವುದು.<br>• ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಳ್ಳುವುದು.<br>• ಆರ್ಥಿಕತೆಯನ್ನು ಆಧುನೀಕರಣಗೊಳಿಸುವುದು |
| **24)** | • ರಾಷ್ಟ್ರೀಯ ಉಳಿತಾಯ ಪತ್ರ<br>• ಅಂಚೆ ಉಳಿತಾಯ ಖಾತೆಗಳು<br>• ಕಿಸಾನ್ ವಿಕಾಸ ಪತ್ರ<br>• ಆವರ್ತ ಠೇವಣಿಗಳು<br>• ಅಂಚೆ ವಿಮೆ<br>• ನಿವೃತ್ತಿ ವೇತನ<br>• ಹಣದ ವರ್ಗಾವಣೆ |
| **25)** | • ಆಧುನಿಕತೆ, ಜಾತ್ಯತೀತತೆ, ಪ್ರಜಾಪ್ರಭುತ್ವ ಮೊದಲಾದ ಪರಿಕಲ್ಪನೆಗಳ ಪರಿಚಯವಾಯಿತು.<br>• ರಾಷ್ಟ್ರೀಯವಾದಿ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು.<br>• ವೃತ್ತ ಪತ್ರಿಕೆಗಳು ಹುಟ್ಟಿ ಬೆಳೆಯತೊಡಗಿದವು.<br>• ಹೊಸ ಸಾಮಾಜಿಕ ಮತ್ತು ಧಾರ್ಮಿಕ ಚಳವಳಿಗಳು ಹುಟ್ಟಿಕೊಂಡವು.<br>• ಭಾರತೀಯ ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ನಾವಿನ್ಯತೆ ಉಂಟಾಯಿತು.<br>• ಜಗತ್ತಿನಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಗಳ ಪ್ರಭಾವ ಭಾರತೀಯರ ಮೇಲೂ ಆಯಿತು.<br>• ಭಾರತೀಯರು ತಮ್ಮ ಸಮೃದ್ಧ ಸಾಂಸ್ಕೃತಿಕ ಪರಂಪರೆಗಳನ್ನು ಅರಿತುಕೊಳ್ಳಲು ಸಾಧ್ಯವಾಯಿತು.<br>ಅಥವಾ<br>• ಶಿವಲಿಂಗರುದ್ರ ಸರ್ಜನ ಮರಣಾನಂತರ ಶಿವಲಿಂಗಪ್ಪ ಎಂಬ ಹುಡುಗನನ್ನು ದತ್ತು ಪಡೆದು ಚೆನ್ನಮ್ಮ ಆಡಳಿತವನ್ನು ನಿರ್ವಹಿಸಲು ಪ್ರಾರಂಭಿಸಿದಳು.<br>• ಥ್ಯಾಕರೆ ದತ್ತು ಮಕ್ಕಳಿಗೆ ಹಕ್ಕಿಲ್ಲವೆಂದು ಕಿತ್ತೂರಿನ ಆಡಳಿತವನ್ನು ವಶಪಡಿಸಿಕೊಳ್ಳಲು ಯತ್ನಿಸಿದನು.<br>• ಕಿತ್ತೂರಿನ ಖಜಾನೆ, ಕೋಟೆ ಕೊತ್ತಲಗಳ ಸುಪರ್ದಿಯನ್ನು ತನ್ನ ವಶಕ್ಕೆ ತೆಗೆದುಕೊಂಡನು.<br>• ಪರಿಣಾಮವಾಗಿ ಚೆನ್ನಮ್ಮ ಬ್ರಿಟಿಷರ ವಿರುದ್ಧ ಯುದ್ಧ ಅನಿವಾರ್ಯವೆಂಬ ನಿರ್ಣಯಕ್ಕೆ ಬಂದಳು.<br>• ಕಿತ್ತೂರಿನ ಸೈನ್ಯ ಬ್ರಿಟಿಷ್ ಸೈನ್ಯದ ಮೇಲೆ ದಾಳಿ ಮಾಡಿತು. |

| | |
|---|---|
| **26)** | • ಏಕದೇವತಾರಾಧನೆಯನ್ನು ಪ್ರತಿಪಾದಿಸಿದರು<br>• ಅರ್ಥಹೀನ ಆಚರಣೆಗಳನ್ನು ವಿರೋಧಿಸಿದರು<br>• ಪ್ರತಿಯೊಬ್ಬ ವ್ಯಕ್ತಿಯು ಘನತೆಯಿಂದ ಬಾಳಬೇಕು<br>• ಬಾಲ್ಯವಿವಾಹ & ಬಹುಪತ್ನಿತ್ವವನ್ನು ವಿರೋಧಿಸಿತು<br>• ವಿಧವೆಯರ ದುಸ್ಥಿತಿಯನ್ನು ದೂರ ಮಾಡುವುದು<br>• ಒಳ್ಳೆಯದು ಎಲ್ಲಿದ್ದರೂ ಅದನ್ನು ಸ್ವೀಕರಿಸುವುದು<br>• ಇಂಗ್ಲಿಷ್ ಶಿಕ್ಷಣಕ್ಕೆ ಒತ್ತು ನೀಡಿದರು |
| **27)** | • ಶಿವಾಜಿಯ ಸೇನೆಯನ್ನು ಮಧುರೆ, ಇಕ್ಕೇರಿ, ಬಿಜಾಪುರಗಳಲ್ಲಿ ಹಿಮ್ಮೆಟ್ಟಿಸಿದರು.<br>• ಮಾಗಡಿ, ಮಧುಗಿರಿ, ಕೊರಟಗೆರೆ ಮತ್ತಿತರ ಪ್ರಾಂತ್ಯಗಳನ್ನು ವಶಪಡಿಸಿಕೊಂಡರು.<br>• ಮೊಗಲ್ ಸೇನಾನಿಯಿಂದ ಬೆಂಗಳೂರು ಕೊಂಡುಕೊಂಡರು.<br>• ಆಡಳಿತದಲ್ಲಿ ನೆರವಿಗಾಗಿ ಸಚಿವ ಸಂಪುಟ(ಅಠಾರ ಕಛೇರಿ) ವನ್ನು ನೇಮಕ ಮಾಡಿದರು.<br>• ಅಂಚೆ ವ್ಯವಸ್ಥೆಯನ್ನು ಜಾರಿಗೆ ತಂದರು.<br>• ಕಾವೇರಿ ನದಿಗೆ ಅಣೆಕಟ್ಟು ಕಟ್ಟಿ ಚಿಕ್ಕದೇವರಾಜ ನಾಲೆ ಮತ್ತು ದೊಡ್ಡ ದೇವರಾಜ ನಾಲೆ ಎಂಬ ಎರಡು ಕಾಲುವೆಗಳನ್ನು ನಿರ್ಮಿಸಿದರು.<br>• ಅನೇಕ ಕವಿಗಳಿಗೆ ಮತ್ತು ಪಂಡಿತರಿಗೆ ಆಶ್ರಯ ನೀಡಿದರು.<br>• ಕರ್ನಾಟಕ ಕವಿಚಕ್ರವರ್ತಿ, ಅಪ್ರತಿಮ ವೀರ, ತೆಂಕಣರಾಜ, ನವಕೋಟಿ ನಾರಾಯಣ ಎಂಬ ಬಿರುದುಗಳಿದ್ದವು. |
| **28)** | • ವಿಶ್ವ ಕುಟುಂಬದ ಪರಿಕಲ್ಪನೆಯ ಸಾಕಾರ<br>• ಪರಸ್ಪರ ಸಹಕಾರ ಮತ್ತು ಅನ್ಯೋನ್ಯತೆ<br>• ರಾಷ್ಟ್ರೀಯ ಹಿತಾಸಕ್ತಿಗಳು<br>• ಗಡಿ ಭದ್ರತೆ<br>• ವಿದೇಶ ವ್ಯಾಪಾರ<br>• ಆರ್ಥಿಕ ಲಾಭ<br>• ರಾಷ್ಟ್ರದ ಗೌರವ |
| **29)** | • ಸಾಮಾಜಿಕ ಸ್ತರವಿನ್ಯಾಸವು ಸಾಮಾಜಿಕವಾದದ್ದು<br>• ಸಾಮಾಜಿಕ ಸ್ತರವಿನ್ಯಾಸ ಸರ್ವವ್ಯಾಪಕವಾದದ್ದು<br>• ಸ್ತರವ್ಯವಸ್ಥೆ ಪುರಾತನವಾದದ್ದು<br>• ಸ್ತರವಿನ್ಯಾಸವು ವಿವಿಧ ರೂಪಗಳಲ್ಲಿದೆ |
| **30)** | • ಅರಣ್ಯಪೋಷಣೆ ಮತ್ತು ಮರು ಅರಣ್ಯೀಕರಣ<br>• ಅತಿಯಾಗಿ ಮೇಯಿಸುವಿಕೆಯ ನಿಯಂತ್ರಣ<br>• ಸಮೋನ್ನತಿ ಬೇಸಾಯ<br>• ಚೆಕ್ ಡ್ಯಾಮ್‌ಗಳ ನಿರ್ಮಾಣ<br>• ಬದುಗಳ ನಿರ್ಮಾಣ<br>• ಕೊರಕಲು ನಿಯಂತ್ರಣ<br>• ಮೆಟ್ಟಿಲು ಪಂಕ್ತಿ ಬೇಸಾಯ |
| **31)** | • ಕೃಷಿ ಕ್ಷೇತ್ರದ ವಿಸ್ತರಣೆ<br>• ರಸ್ತೆ ಮತ್ತು ರೈಲು ಮಾರ್ಗಗಳು<br>• ನೀರಾವರಿ ಯೋಜನೆಗಳ ನಿರ್ಮಾಣ<br>• ಕೈಗಾರಿಕೀಕರಣ<br>• ನಗರೀಕರಣ<br>• ಅತಿಯಾಗಿ ಮೇಯಿಸುವಿಕೆ<br>• ಕಾಡ್ಗಿಚ್ಚು<br>**ಅಥವಾ**<br>• ನೀರಾವರಿ ಪೂರೈಕೆ.<br>• ಪ್ರವಾಹಗಳ ನಿಯಂತ್ರಣ.<br>• ಜಲ ವಿದ್ಯುತ್ ತಯಾರಿಕೆ.<br>• ಮಣ್ಣಿನ ಸವೆತ ನಿಯಂತ್ರಣ. |

| | |
|---|---|
| | • ಒಳನಾಡಿನ ನೌಕಾಯಾನ.<br>• ಒಳನಾಡಿನ ಮೀನುಗಾರಿಕೆ.<br>• ಮನರಂಜನೆ ಸೌಲಭ್ಯ.<br>• ಗೃಹಬಳಕೆ ಮತ್ತು ಕೈಗಾರಿಕೆಗಳಿಗೆ ನೀರು ಪೂರೈಕೆ.<br>• ನಿರುಪಯುಕ್ತ ಭೂಮಿಯನ್ನು ಕೃಷಿಗಾಗಿ ಪರಿವರ್ತನೆ.<br>• ಅರಣ್ಯ ಪೋಷಣೆ ಇತ್ಯಾದಿ. |
| 32) | • ರಾಷ್ಟ್ರೀಯ ಆದಾಯ ಮತ್ತು ತಲಾ ಆದಾಯಗಳು ಗಣನೀಯವಾಗಿ ಹೆಚ್ಚಳವಾಗಿವೆ.<br>• ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಲಾಗಿದೆ.<br>• ಕೈಗಾರಿಕೆ ಮತ್ತು ಸೇವಾ ವಲಯಗಳ ವಿಸ್ತರಣೆಯಿಂದ ಉದ್ಯೋಗಾವಕಾಶಗಳು ಹೆಚ್ಚಿವೆ.<br>• ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆ ಹೆಚ್ಚುತ್ತಿದೆ.<br>• ನಮ್ಮ ತಂತ್ರಜ್ಞರ ಸೇವೆಯನ್ನು ಹೊರ ದೇಶಗಳಿಗೆ ರಫ್ತು ಮಾಡಲಾಗುತ್ತಿದೆ.<br>• ಭಾರತದ ತಯಾರಿಕಾ ಮತ್ತು ಎಂಜಿನಿಯರಿಂಗ್ ಸರಕುಗಳ ರಫ್ತು ಪ್ರಮಾಣ ಅಗಾಧವಾಗಿ ಹೆಚ್ಚಿದೆ.<br>• ಗ್ರಾಮೀಣ ಬಡ ಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸಿಕೊಡಲು ಪ್ರಯತ್ನಿಸಲಾಗಿದೆ.<br>• ಜನರ ನಿರೀಕ್ಷಿತ ಜೀವಿತಾವಧಿ ಮತ್ತು ಸಾಕ್ಷರತಾ ಪ್ರಮಾಣ ಹೆಚ್ಚುತ್ತಿದೆ.<br>• ಶಿಶು ಮರಣ ಮತ್ತು ತಾಯಂದಿರ ಮರಣದರಗಳು ಕಡಿಮೆಯಾಗುತ್ತಿವೆ.<br>• ಜನನ ಮತ್ತು ಮರಣ ದರಗಳೆರಡೂ ಕಡಿಮೆಯಾಗುತ್ತಿವೆ.<br>**ಅಥವಾ**<br>• ಕೃಷಿ ಹಾಗೂ ಕೃಷಿಯೇತರ ವಲಯಗಳ ಅಭಿವೃದ್ಧಿ<br>• ಅಧಿಕ ಕೃಷಿ ವರಮಾನ<br>• ಔದ್ಯಮಿಕ ಸರಕು-ಸೇವೆಗಳಿಗೆ ಬೇಡಿಕೆ ಹೆಚ್ಚಳ<br>• ಅಧಿಕ ಉದ್ಯೋಗ ಸೃಷ್ಟಿ<br>• ಶಿಕ್ಷಣ ಮತ್ತು ಕೌಶಲಗಳಿಂದಾಗಿ ಹೆಚ್ಚಿನ ಉತ್ಪಾದಕತೆ<br>• ರಾಷ್ಟ್ರೀಯ ಉತ್ಪನ್ನ ಹೆಚ್ಚಳ<br>• ಕೃಷಿ ಸಂಸ್ಕರಣೆ, ಸಣ್ಣ ಕೈಗಾರಿಕೆಗಳ ಅಭಿವೃದ್ಧಿ<br>• ಬಡತನದ ಇಳಿಕೆ |
| 33) | • ಬ್ಯಾಂಕ್ ಖಾತೆಯನ್ನು ನಿರ್ಧರಿಸುವುದು<br>• ಬ್ಯಾಂಕ್ ಅಧಿಕಾರಿಯನ್ನು ಸಂಪರ್ಕಿಸುವುದು<br>• ಪ್ರಸ್ತಾವನೆ ಅರ್ಜಿಯನ್ನು ತುಂಬುವುದು<br>• ಪರಿಚಿತರ ಉಲ್ಲೇಖನವನ್ನು ಕೊಡುವುದು<br>• ಅರ್ಜಿಯನ್ನು ಅಧಿಕಾರಿಗೆ ಒಪ್ಪಿಸುವುದು<br>• ಅಧಿಕಾರಿಯ ಒಪ್ಪಿಗೆ<br>• ಆರಂಭಿಕ ಠೇವಣಿ<br>**ಅಥವಾ**<br>• ಠೇವಣಿಗಳನ್ನು ಅಂಗೀಕರಿಸುವುದು.<br>• ಸಾಲ ಕೊಡುವುದು.<br>• ಹಣವನ್ನು ವರ್ಗಾಯಿಸುವುದು.<br>• ಚೆಕ್ಕು & ಹುಂಡಿಗಳ ಮೇಲೆ ಹಣ ವಸೂಲಿ ಮಾಡುವುದು.<br>• ಹುಂಡಿಗಳನ್ನು ಸೋಡಿ ಮಾಡುವುದು.<br>• ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು.<br>• ವಿದೇಶಿ ವಿನಿಮಯದ ವ್ಯವಹಾರಗಳ ನಿರ್ವಹಿಸುವುದು. |
| 34) | • ಟಿಪ್ಪು ಭಾರತೀಯ ರಾಜರ ಒಕ್ಕೂಟವನ್ನು ತನ್ನಡೆಗೆ ಸೆಳೆಯಲು ಪ್ರಯತ್ನಗಳನ್ನು ಮಾಡುತ್ತಿದ್ದನು.<br>• ಟಿಪ್ಪು ಬ್ರಿಟಿಷರ ವಿರುದ್ಧವಾಗಿದ್ದ ಫ್ರೆಂಚರ ಸಹಕಾರ ಪಡೆಯಲು ಪ್ರಯತ್ನಿಸಿ ರಾಯಭಾರಿಯನ್ನು ಕಳುಹಿಸಿದ್ದನು.<br>• ಬ್ರಿಟಿಷರ ಅಮಾನವೀಯ ಮತ್ತು ಅಸಮಾನ ಷರತ್ತುಗಳನ್ನು ಒಳಗೊಂಡಿದ್ದ ಒಪ್ಪಂದವನ್ನು ಟಿಪ್ಪು ನಿರಾಕರಿಸಿದನು.<br>• ಮೈಸೂರು ಪ್ರಾಂತ್ಯದಲ್ಲಿ ಭದ್ರಗೊಳಿಸಿತು.<br>• 1799 ರಲ್ಲಿ ಟಿಪ್ಪು ಮತ್ತು ಬ್ರಿಟಿಷರ ನಡುವೆ ಯುದ್ಧ ನಡೆಯಿತು.<br>• ಯುದ್ಧದಲ್ಲಿ ಟಿಪ್ಪುವಿನ ಮರಣವಾಗಿ ಮೈಸೂರು ರಾಜ್ಯ ಬ್ರಿಟಿಷರ ವಶವಾಯಿತು. |

| | |
|---|---|
| | • ಬ್ರಿಟಿಷರು ಆತನ ಹತೋಟಿಯಲ್ಲಿದ್ದ ಪ್ರದೇಶಗಳನ್ನು ಮರಾಠರು ಮತ್ತು ನಿಜಾಮನೊಂದಿಗೆ ಹಂಚಿಕೊಂಡರು.<br>• ಒಂದು ಸಣ್ಣ ಭೌಗೋಳಿಕ ಪ್ರದೇಶವನ್ನು ಮೈಸೂರು ಒಡೆಯರ ರಾಜವಂಶದ ಪ್ರತಿನಿಧಿಗೆ ವರ್ಗಾಯಿಸಿದರು.<br>• ಈ ಪ್ರದೇಶ ತರುವಾಯ ಮೈಸೂರು ಸಂಸ್ಥಾನವೆಂದು ಹೆಸರಾಯಿತು.<br>**ಅಥವಾ**<br>• ಜೀವನ ಪ್ರೀತಿಯಲ್ಲಿರುವ ಮಹತ್ವವನ್ನು ತೆರೆದಿಟ್ಟರು.<br>• ವ್ಯಕ್ತಿಯ ಇರುವಿಕೆಗೆ ಮತ್ತು ಸಾಮರ್ಥ್ಯಕ್ಕೆ ಮಹತ್ವ ನೀಡಿದರು.<br>• ಮೋಕ್ಷ ಸಾಧನೆಗಿಂತ ಸಮಾಜ ಸೇವೆಯೇ ಮುಖ್ಯವೆಂದರು.<br>• ಹಿಂದೂ ಧರ್ಮದ ವಿಶ್ವಭ್ರಾತೃತ್ವವನ್ನು ಸಾರಿದರು.<br>• ಭಾರತೀಯ ಸಂಸ್ಕೃತಿಯನ್ನು ವಿಶ್ವಕ್ಕೆ ಪರಿಚಯಿಸಿದರು.<br>• ಈ ಮೂಲಕ ಯುವಕರಿಗೆ ಪ್ರೇರಣಾಶಕ್ತಿಯಾಗಿದ್ದರು.<br>• ಇವರ ಚಿಂತನೆಗಳಿಂದ ಗಾಂಧೀಜಿಯವರು ಸೇರಿದಂತೆ ಅನೇಕ ರಾಷ್ಟ್ರನಾಯಕರು ಪ್ರೇರಣೆಗೊಂಡರು. |
| **35)** | • ಶಿವನಸಮುದ್ರದಲ್ಲಿ ಜಲವಿದ್ಯುತ್ ಕೇಂದ್ರವನ್ನು ಸ್ಥಾಪಿಸಿದರು.<br>• ಕೋಲಾರದ ಚಿನ್ನದ ಗಣಿ ಹಾಗೂ ಬೆಂಗಳೂರಿಗೆ ವಿದ್ಯುತ್ ಸರಬರಾಜು ಮಾಡಲಾಯಿತು.<br>• ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಶುಲ್ಕವನ್ನು ರದ್ದುಗೊಳಿಸಿದರು.<br>• ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಏಳಿಗೆಗೆ ನೆರವು ನೀಡಿದರು.<br>• ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದರು.<br>• ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯನ್ನು 1905ರಲ್ಲಿ ಸ್ಥಾಪಿಸಿದರು.<br>• ಬೆಳಗೊಳದ ಹತ್ತಿರ ಕಾವೇರಿ ನದಿಗೆ ಅಣೆಕಟ್ಟು ಕಟ್ಟಿದರು.<br>• ಹೊಸ ರೈಲು ಮಾರ್ಗಗಳನ್ನು ನಿರ್ಮಿಸಿದರು.<br>• ನ್ಯಾಯ ವಿಧಾಯಕ ಸಭೆಯನ್ನು ರಚಿಸಲಾಯಿತು.<br>• ಭದ್ರಾವತಿಯಲ್ಲಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ, ಕಾಗದ ಕಾರ್ಖಾನೆಯನ್ನು ಸ್ಥಾಪಿಸಿದರು.<br>• ಮಂಡ್ಯದ ಸಕ್ಕರೆ ಕಾರ್ಖಾನೆ, ಮೈಸೂರಿನ ಗಂಧದ ಎಣ್ಣೆ ಕಾರ್ಖಾನೆ, ಬೆಂಗಳೂರಿನ ಸಾಬೂನು ಕಾರ್ಖಾನೆಗಳನ್ನು ಸ್ಥಾಪಿಸಿದರು.<br>• ಬೆಳಗೊಳದಲ್ಲಿ ರಾಸಾಯನಿಕ ವಸ್ತುಗಳ ಮತ್ತು ಕೃತಕ ಗೊಬ್ಬರಗಳ ಕಾರ್ಖಾನೆಯನ್ನು ಸ್ಥಾಪಿಸಿದರು.<br>• ಇವರ ಆಡಳಿತದಿಂದಾಗಿ ಮೈಸೂರು "ಮಾದರಿ ರಾಜ್ಯ" ಎಂಬ ಹೆಸರನ್ನು ಪಡೆದಿತ್ತು.<br>• ಮಹಾತ್ಮ ಗಾಂಧಿಯವರು ಇವರನ್ನು 'ರಾಜರ್ಷಿ' ಎಂದು ಕರೆದಿದ್ದಾರೆ. |
| **36)** | • 1988ರಲ್ಲಿ ರಾಷ್ಟ್ರೀಯ ಸಾಕ್ಷರತಾ ಮಿಷನ್ ಸ್ಥಾಪಿಸಲಾಗಿದೆ.<br>• ಸಾಕ್ಷರ ಭಾರತ ಕಾರ್ಯಕ್ರಮವನ್ನು ರೂಪಿಸಲಾಗಿದೆ.<br>• ಮಹಿಳಾ ಶಿಕ್ಷಣ ಮತ್ತು ಜಾಗೃತಿಗೆ ಆದ್ಯತೆ ನೀಡಲಾಗಿದೆ.<br>• ವಿಕಲಚೇತನರ ಶಿಕ್ಷಣಕ್ಕೆ ಆದ್ಯತೆ ನೀಡಲಾಗಿದೆ.<br>• 2001ರಲ್ಲಿ ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮ ಜಾರಿಗೆ ತರಲಾಗಿದೆ.<br>• ಸಂವಿಧಾನದ 21ನೇ ಎ ವಿಧಿಯಂತೆ ಶಿಕ್ಷಣ ಮೂಲಭೂತ ಹಕ್ಕೆಂದು ಪರಿಗಣಿಸಲಾಗಿದೆ.<br>• 2009ರಲ್ಲಿ ಶಿಕ್ಷಣ ಹಕ್ಕು ಕಾಯ್ದೆ ಜಾರಿಗೊಳಿಸಲಾಗಿದೆ.<br>• 6 ರಿಂದ 14 ವರ್ಷ ವಯೋಮಾನದವರೆಗೆ ಶಿಕ್ಷಣವನ್ನು ಕಡ್ಡಾಯಗೊಳಿಸಲಾಗಿದೆ. |
| **37)** | • ಜನ ಜೀವನದ ಮೇಲೆ ಅಪಾರ ಪ್ರಭಾವವನ್ನು ಬೀರುತ್ತವೆ.<br>• ಭಾರತಕ್ಕೆ ರಕ್ಷಣೆಯನ್ನು ಒದಗಿಸುತ್ತವೆ.<br>• ಉತ್ತರ ಏಷ್ಯಾದಿಂದ ಬೀಸುವ ಶೀತಗಾಳಿ ತಡೆಯುತ್ತವೆ.<br>• ನದಿಗಳ ಉಗಮ ಪ್ರದೇಶವಾಗಿವೆ.<br>• ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಅನುಕೂಲವಾಗಿವೆ.<br>• ವಿಶಾಲವಾದ ಮೈದಾನಗಳನ್ನು ನಿರ್ಮಿಸಿವೆ.<br>• ವೈವಿಧ್ಯಮಯ ಸಸ್ಯ-ಪ್ರಾಣಿಗಳಿಗೆ ಆಶ್ರಯ ತಾಣವಾಗಿವೆ.<br>• ಅಪಾರ ಖನಿಜ ಸಂಪನ್ಮೂಲಗಳನ್ನು ಒಳಗೊಂಡಿವೆ<br>• ಪ್ರವಾಸೋದ್ದಿಮೆ ಮತ್ತು ಧಾರ್ಮಿಕ ಕೇಂದ್ರಗಳಿವೆ |

| | |
|---|---|
| 38) |  |